(*b*) the extent of Government waste lands and cultivable forest land available in each of the above three talukas;

(*c*) the steps Government proposes to take to utilise the above lands for the purpose of grow more food;

(*d*) whether they propose to revise the land grant rules in order to grant waste lands to genuine cultivators?

A.—Sri B. RACHAIAH (Minister for Revenue and Forests).—

(*a*)

Taluk		*Extent* A. G.
1. Bhatkal	...	17,980-21
2. Honavar	...	20,989-00
3. Kumta	...	37,378-34

(*b*)

Taluk	*Govt. waste land* A. G.		*Cultivable forest land* A. G.
1. Bhatkal	171-14	...	226-06
2. Honavar	217-00	...	902-00
3. Kumta	431-00	...	1,006-10

(*c*) The lands will be disposed of according to the Land Grant Rules.

(*d*) No.

CALLING ATTENTION TO A MATTER OF URGENT PUBLIC IMPORTANCE.

Sri M. NAGAPPA (Raichur).—I beg to call the attention of the Hon. Minister for Public Works to the unauthorised opening of Right Bank Canal to Rajolibandha Project.

†Sri VEERENDRA PATIL (Minister for Public Works).—In response to the Calling Attention Notice by Sri M. Nagappa, I wish to state that the sanctioned Rajolibandha Project provides only for the Left Bank Canal for irrigation in Raichur District in Mysore State and Mehaboobnagar District of Andhra Pradesh. So far, no work on the execution of the Right Bank Canal has been taken up by Andhra Pradesh.

ಶ್ರೀ ಎಂ. ನಾಗಪ್ಪ.—ಸ್ವಾಮಿ ಇದರ ಬಗ್ಗೆ ಈಗಾಗಲೇ ರೈಟ್ ಬ್ಯಾಂಕ್ ಕೆನಾಲ್ ತೆಗೆದು ೀರು ತೆಗೆದುಕೊಳ್ಳುತ್ತೀವೆ ಎಂದು ಚೀಫ್ ಇಂಜಿನಿಯರು ಹೇಳಿರುವ ವಿಷಯ ಸರ್ಕಾರದ ಮನಕ್ಕೆ ಬಂದಿಲ್ಲವೇ? ಅದು ಬಂದಿದ್ದರೆ ಮುಂದೆ ಏನು ಮಾಡುತ್ತೀರಿ? ಅದನ್ನು ಹರ್‌ಪ ಪ್ಲಿಯೇಟ್ ಮಾಡಬೇಕೆಂದು ಸರ್ಕಾರದ ಯೋಚನೆಯಲ್ಲಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಅಲ್ಲಿಗೆ ನಮ್ಮ ಸೂಪರಿಂಟೆಂಡೆಂಟ್ ಇಂಜಿನಿಯರು, ಅಸಿಸ್ಟೆಂಟ್ ಇಂಜಿನಿಯರನ್ನು ಡೆಪ್ಯೂಟ್ ಮಾಡಿ ಆ ವಿಷಯದಲ್ಲಿ ಪರಿಶೀಲನೆ ಮಾಡಿ ರಿಪೋರ್ಟ್ ಮಾಡಬೇಕೆಂದು ಹೇಳಿದ್ದರು. ಅದರ ಪ್ರಕಾರ ಅವರು ರಿಪೋರ್ಟ್ ಮಾಡಿದ್ದಾರೆ. ಅಲ್ಲಿ ಕೆನಾಲ್ ತೆಗೆಯುವ ಬಗ್ಗೆ ಅವರು ಸರ್ವೆ ಮಾಡಿದ್ದಾರೆಯೇ ಹೊರತು, ಕೆನಾಲ್ ತೆಗೆಯುವಂತ ಕೆಲಸ ಮಾಡಿಲ್ಲ. ಅದು ಇಂಟರ್ ಸ್ಟೇಟ್ ಪ್ರಾಜೆಕ್ಟ್ ಆಗಿರುವುದರಿಂದ ಅವರು ನಮ್ಮ ಸರ್ಕಾರದವರೊಡನೆ ಪೂರ್ತುಕತೆ ನಡೆಸದೆ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಇನ್ನೂ ಏನೂ ಮಾಡಿಲ್ಲ. ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯೇನೂ ಒದಗಿಲ್ಲ.

ಶ್ರೀ ಎಂ. ನಾಗಪ್ಪ.—ಅಲ್ಲಿ ಇಂಜಿನಿಯರು ಈ ಕೆಲಸ ಪ್ರಾರಂಭ ಮಾಡಬೇಕೆಂದಿದ್ದಾರೆಂದು ತಿಳಿದುಬಂದಿದೆ. ಅದ್ದರಿಂದ ದಯವಿಟ್ಟು ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಆ ವಿಚಾರವನ್ನು ತಿಳಿದುಕೊಳ್ಳುತ್ತೀರಾ ?

Sri VEERENDRA PATIL.—It is reported by the Assistant Engineer who visited the Project that no canal is excavated or any canal head sluice is constructed on the right bank but surverys have been conducted recently for the canal as chain stones and trial pits are observed along the alignment from the right end of the Anecut.

Member's Representations

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈ ಸಭೆ ಪ್ರಾರಂಭವಾಗಿ 3 ದಿವಸಗಳಾಯಿತು. ಈ ಸಭೆಯಲ್ಲಿ ಇದುವರೆಗೆ ಈ ದೇಶದ ಮುಖ್ಯ ಮಂತ್ರಿಗಳ ದರ್ಶನ ಆಗಿಲ್ಲ. ಅವರು ಏತಕ್ಕೋಸ್ಕರ ಈ ಸಭೆಗೆ ಬರಲಿಲ್ಲ ? ಏತಕ್ಕೋಸ್ಕರ ಈ ಸಭೆಗೆ ಬರಲಿಲ್ಲ ಎನ್ನುವ ಕಾರಣವನ್ನು ಅವರು ತಮಗೆ ತಿಳಿಸಿದ್ದಾರೆಯೇ ಇದಕ್ಕೆ ಕಾರಣ ಇಷ್ಟೆ, ಈ ಸಭೆ ಯುಗಾದಿ ಹಬ್ಬದ ವಿರಾಮಕ್ಕೆ ವಿಳುವುದಕ್ಕೆ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಗಮನಾರ್ಹವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ದೇಶದಲ್ಲಿ ಮಂತ್ರಿಗಳು ಮತ್ತು ಮಾಜಿ ಮಂತ್ರಿಗಳು ಮತ್ತು ಕಾಂಗ್ರೆಸ್ಸಿನ ಅಧಿಕಾರವರ್ಗಕ್ಕೆ ಸೇರಿದವರು ಯಾರು ಯಾರು ಇದ್ದಾರೆಯೋ ಅವರ ಆಸ್ತಿಪಾಸ್ತಿಗಳನ್ನು ವಿಚಾರಣೆ ಮಾಡತಕ್ಕ ವಿಷಯದಲ್ಲಿ ಒಂದು ವಾರದೊಳಗೆ ಅವರಿಗೆ ನೋಟೀಸ್ ಕೊಟ್ಟು ಅವರಿಂದ ಆಸ್ತಿಪಾಸ್ತಿಗಳ ವಿವರಗಳನ್ನು ತರಿಸುತ್ತೇನೆ, ಯಾರು ಬೇಕಾದರೂ ಆ ಬಗ್ಗೆ ಬರೆಯ ಬಹುದು ಎಂದು ಈ ದೇಶದಲ್ಲಿ ಒಂದು ಕುತೂಹಲ ಭರತಕ್ಕಂಥ, ಒಂದು ಗಮನಾರ್ಹವಾದ ಹೇಳಿಕೆಯನ್ನು ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿದ್ದಾರೆ. ನಾವು ಭಾವನೆ ಮಾಡಿಕೊಂಡಿದ್ದೆವು, ಒಂದು ವಾರದೊಳಗೆ ಎಲ್ಲರಿಗೂ ಒಂದೊಂದು ನೋಟೀಸ್ ಹೋಗುತ್ತದೆ, ಅವರಿಂದ ವಿವರಣೆ ಬರುತ್ತದೆ, ನಾವೂ ಕೂಡ ಆ ಬಗ್ಗೆ ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳೋಣ ಎಂದು. ಮುಖ್ಯ ಮಂತ್ರಿಗಳು ಆ ಹೇಳಿಕೆಯನ್ನು ಕೊಟ್ಟಮೇಲೆ ಅವರು ಈ ಸಭೆಗೆ ಮತ್ತೆ ಬಂದೇ ಇಲ್ಲ. ಹೇಳಿಕೆಯನ್ನು ಕೊಟ್ಟು 10-12 ದಿನಗಳಾದರೂ ಏನೂ ಆಗಿಲ್ಲ. ಅದಕ್ಕೋಸ್ಕರವಾಗಿ ನಾನು ಅವರ ಹೇಳಿಕೆಯ ಮತ್ತು ಅವರ ಗೈರು ಹಾಜರಿಯ ಬಗ್ಗೆ ಒಂದು ನಿಜಸ್ಥಿತಿಯನ್ನು ಅರಿಯುವವನಾಗಿದ್ದೇನೆ. ಈ ಸಭೆಯಲ್ಲಿ ಮುಖ್ಯ ಮಂತ್ರಿಗಳ ವಿಚಾರವನ್ನು ನಾನು ಆಗಾಗ್ಗೆ ಪ್ರಸ್ತಾಪ ಮಾಡುತ್ತಾ ಬಂದಿದ್ದೇನೆ. ಈ ವಿಚಾರವನ್ನು ಅಗಿಂದಾಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂಬ ಹಂಬಲ ನನಗಿಲ್ಲ. ಈ ಸಭೆಯ ಘನತೆಯ ದೃಷ್ಟಿಯಿಂದ ಅವರು ಈ ಸಭೆಗೆ ಸಾಕಷ್ಟು ಗೌರವವನ್ನು ತೋರಿಸಬೇಕಾದ್ದು ಅವರ ಕರ್ತವ್ಯ. ಅವರ ಕರ್ತವ್ಯ ದೃಷ್ಟಿಯಿಂದ ನಾನು ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದೇನೆ. ಇವೊತ್ತು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಏತಕ್ಕೋಸ್ಕರ ಬರಲಿಲ್ಲ ? ಈಗ ಮೂರು ದಿವಸಗಳಿಂದ ಅವರು ಈ ಸಭೆಗೆ ಬಾರದೆ ಇರುವುದಕ್ಕೆ ಅವರು ಅಧ್ಯಕ್ಷರಿಗೆ ಕಾಗದವನ್ನು ಬರೆದು ಕಾರಣವನ್ನು ಸೂಚಿಸಿದ್ದರೆ ತಾವು ಅದನ್ನು ಈ ಸಭೆಗೆ ತಿಳಿಸಬೇಕು. ನಿನ್ನೆಯ ದಿವಸ ಮಾನ್ಯ ಮಂತ್ರಿಗಳು ಒಂದು ಮೀಟಿಂಗ್ ಕರೆದಿದ್ದರು. ಅದಕ್ಕೆ ನನ್ನನೂ ಆಹ್ವಾನ ಮಾಡಿದ್ದರು. ಆ ಮೀಟಿಂಗ್ ಏತಕ್ಕೋಸ್ಕರ ಎಂದರೆ ದಿವಂಗತ ಮಾಜಿ ಪ್ರಧಾನಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳವರ ಮೆಮೋರಿಯಲ್